ಕರ್ನಾಟಕ ಸರ್ಕಾರ

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಬೆಳಗಾವಿ

ಕ್ರಸಂಖ್ಯಾ/ಎಲ್‌ಜಿಎಲ್/ವಿವ/68/2015-16 ಬೆಳಗಾವಿ ದಿನಾಂಕ: .01.2016.
03-02-

<u>ವಿಷಯ</u>: ಗೋಕಾಕ ತಾಲೂಕಿನ ಖನಗಾಂವ ಗ್ರಾಮದ ರಿಸ ನಂಬರ 700 ನೇದ್ದರಲ್ಲಿ ಮಾರ್ಕಂಡೆಯ ಬಲದಂಡೆ ಕಾಲುವೆಯಿಂದ ಚಚಡಿ ಏತ ನೀರಾವರಿ ಯೋಜನೆಗೆ ಒಟ್ಟು ಕ್ಷೇತ್ರ 142ಎಕರೆ 07ಗುಂಟೆ ರ ಪೈಕಿ 16ಎಕರೆ 28ಗುಂಟೆ(6.75 ಹೆಕ್ಟರ್) ಗಾಯರಾಣಾ ಜಮೀನು ನೆಡುತೋಪು ಬೆಳಸಲು ಅರಣ್ಯ ಇಲಾಖೆಗೆ ವರ್ಗಾಯಿಸುವ ಕುರಿತು.

<u>ಓದಿತು</u>:1) ಮಾನ್ಯ ಸರ್ಕಾರದ ಪತ್ರ ನಂ:ಆರ್‌ಡಿ/81/ಎಲ್‌ಜಿಎಲ್/2015 ದಿ :07.01.2016.

2) ಈ ಕಚೇರಿಯ ಪತ್ರ ಸಮಸಂಖ್ಯೆ ದಿನಾಂಕ:07.10.2015.

3) ಕಾರ್ಯನಿರ್ವಾಹಕ ಅಭಿಯಂತರರು ಕನೀನಿನಿ, ಘಬದಂಕಾನಿ ವಿಭಾಗ-3 ಗೋಕಾಕ ಇವರ ಪತ್ರ ನಂ: ಕನೀನಿನ/ ಘಬದಂಕಾನಿ-3/ಚ.ಎ.ನೀಯೋ /ಜಿ.ಬಿ /2014-15 ದಿನಾಂಕ:12.03.2014

4) ಉಪವಿಭಾಗಾಧಿಕಾರಿಗಳು ಬೈಲಹೊಂಗಲ ಇವರ ಪತ್ರ ನಂ/ಎಲ್‌ಎನ್‌ಡಿ/ ಸಿಆರ್/99/2015-16 ದಿನಾಂಕ:31.07.2015.

5) ತಹಶೀಲ್ದಾರ ಗೋಕಾಕ ಇವರ ಪತ್ರ ನಂ/ಎಲ್.ಎನ್.ಡಿ/ವಿವ/93/2015-16 ದಿನಾಂಕ:29.07.2015.

6) ವಲಯ ಅರಣ್ಯ ಅಧಿಕಾರಿಗಳು ಗೋಕಾಕ ಇವರ ಪತ್ರ ನಂ/ಫಅಅ/ಗೋಕಾಕ /2015-16 ದಿನಾಂಕ: 18.08.2015

7) ತಹಶೀಲ್ದಾರ ಗೋಕಾಕ ಇವರ ಪತ್ರ ನಂ/ಎಲ್.ಎನ್.ಡಿ/ವಿವ/93/2015-16 ದಿನಾಂಕ:24.08.2015.

8) ಕರ್ನಾಟಕ ಭೂಕಂದಾಯ ನಿಯಮಗಳು 1966 ರ ನಿಯಮ 97(4).

ಜಿಲ್ಲಾಧಿಕಾರಿಗಳು, ಬೆಳಗಾವಿ ★ Deputy Commissioner, Belgaum ★

<u>ಪ್ರಸ್ತಾವನೆ:</u>

ಓದಿತು (3) ರ ಪತ್ರದಡಿ ಕಾರ್ಯನಿರ್ವಾಹಕ ಅಭಿಯಂತರರು ಕರ್ನಾಟಕ ನೀರಾವರಿ ನಿಗಮ ನಿಯಮಿತ ಘ.ಬ.ದಂ.ಕಾ.ನಿ ವಿಭಾಗ-3 ಗೋಕಾಕ ಇವರು ಗೋಕಾಕ ತಾಲೂಕಿನ ಕೈತನಾಳ ಗ್ರಾಮದ ಬ್ಲಾಕ ನಂ158 ರ ರಿಸ ನಂಬರ 73 ರಲ್ಲಿ 08 ಹೆಕ್ಟರ್ ಜಮೀನನ್ನು ನಡುತೋಪು ಬೆಳೆಸಲು ಅರಣ್ಯ ಇಲಾಖೆಗೆ ವರ್ಗಾಯಿಸಲು ಕೋರಿದ್ದಾರೆ.

ಓದಿತು (4) ಹಾಗೂ (5) ರ ಪತ್ರದಡಿ ಉಪವಿಭಾಗಾಧಿಕಾರಿಗಳು ಬೈಲಹೊಂಗಲ ಮತ್ತು ತಹಶೀಲ್ದಾರ ಗೋಕಾಕ ಇವರು ಗೋಕಾಕ ತಾಲೂಕಿನ ಖನಗಾಂವ ಗ್ರಾಮದ ರಿ.ಸ ನಂಬರ 700 ನೇದ್ದರಲ್ಲಿ ಮಾರ್ಕಂಡೆಯ ಬಲದಂಡೆ ಕಾಲುವೆಯಿಂದ ಚಚಡಿ ಏತ ನೀರಾವರಿ ಯೋಜನೆ ಒಟ್ಟು ಕ್ಷೇತ್ರ 142ಎಕರೆ 07ಗುಂಟೆ ರ ಪೈಕಿ 16ಎಕರೆ 28ಗುಂಟೆ(6.75 ಹೆಕ್ಟರ್) ಗಾಯರಾಣಾ ಜಮೀನು ಅರಣ್ಯ ಇಲಾಖೆಗೆ ವರ್ಗಾಯಿಸುವ ಕುರಿತು ಕಾರ್ಯನಿರ್ವಾಹಕ ಅಭಿಯಂತರರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಜಿ.ಆರ್.ಬಿಸಿ. ವಿಭಾಗ-3, ಗೋಕಾಕ ಇವರ ಪರವಾಗಿ ಪರಿಹಾರಾತ್ಮಕ ನೆಡುತೋಪು ಬೆಳಸಲು ಅರಣ್ಯ ಇಲಾಖೆಗೆ ವರ್ಗಾಯಿಸಲು ಶಿಫಾರಸ್ಸು ಪ್ರಸ್ತಾವನೆ ಸಲ್ಲಿಸಿದ್ದಾರೆ.

1. ಪ್ರಸ್ತಾಪಿತ ಖನಗಾಂವ ಗ್ರಾಮದ ರಿ.ಸ ನಂಬರ 700ರಲ್ಲಿ ಒಟ್ಟು 142ಎ-7ಗು ಸರಕಾರಿ ಗಾಯರಾಣಾ ಜಮೀನು ಇದ್ದಿದು ಸರ್ಕಾರದ ಕಬ್ಜೆಯಲ್ಲಿ ಇರುತ್ತದೆ.
2. ಈ ಜಮೀನಿನಲ್ಲಿ ಅರಣ್ಯ ಇಲಾಖೆಯವರಿಗೆ ನಡೆತೋಪು ಬೆಳಸಲು ಒಟ್ಟು 142ಎ-7ಗು ರ ಪೈಕಿ 16ಎ--- 28ಗು. (6.75 ಹೆಕ್ಟೇರ) ಗಾಯರಾಣ ಜಮೀನನ್ನು ಅರಣ್ಯ ಪ್ರದೇಶಕ್ಕೆ ವರ್ಗಾಯಿಸಿ, ಉಳಿದ 125ಎಕರೆ 19ಗುಂಟೆ ಕ್ಷೇತ್ರವನ್ನು ಸರ್ಕಾರಿ ಗಾಯರಾಣ ಅಂತಾ ಮುಂದುವರಿಸುವುದು.
3. ಪ್ರಸ್ತುತ ಖನಗಾಂವ ಗ್ರಾಮದಲ್ಲಿ. ಒಟ್ಟು 4358ಎಕರೆ ಗಾಯರಾಣಾ ಜಮೀನು ಇದ್ದು. ಒಟ್ಟು ಜಾನುವಾರುಗಳ ಸಂಖ್ಯೆ 23844 ಇರುತ್ತದೆ, ಜಾನುವಾರುಗಳನ್ನು ಮೇಯಿಸಲು 4836ಎಕರೆ ಜಮೀನು ಬೇಕಾಗಿದ್ದು,

Scanned with CamScanner

4. ಗ್ರಾಮದಲ್ಲಿ ಕೊಳವೆ ಭಾಂವಿ ಮತ್ತು ತೆರೆದ ಭಾಂವಿಗಳು ಸಾಕಷ್ಟು ಇದ್ದು . ಹಾಗೂ ಮಾರ್ಕಂಡೆಯ ಬಲದಂಡೆ ಕಾಲುವೆಯಿಂದ ವರ್ಷದಲ್ಲಿ 6ತಿಂಗಳು ನೀರು ಹಾಯುವುದರಿಂದ ಅಲ್ಲಿ ಕಬ್ಬಿನ ಬೆಳೆ ಹಾಗೂ ಗೋವಿನ ಜೋಳ ಹೇರಳವಾಗಿ ಬೆಳೆಯುವುದರಿಂಧ ಮೇವಿನ ಕೊರತೆ ಆಗುವುದಿಲ್ಲ.

5. ಸದರಿ ಗಾಯರಾಣಾ ಜಮೀನು ಒಳ್ಳೆಯ ವಾತಾವರಣ ಹೊಂದಿದ್ದು ಕೆಂಪು ಮಸಾರಿ ಜಮೀನು ಆಗಿರುತ್ತದೆ.

6. ಸದರಿ ರಿಸ ನಂಬರಕ್ಕೆ ಗ್ರಾಮದಿಂದ ಕೈತನಾಳದ ಸಂಪರ್ಕ ರಸ್ತೆಗೆ ಹೊಂದಿಕೊಂಡು ಇರುತ್ತದೆ.

ಓದಿತು (2) ರ ಈ ಕಚೇರಿಯ ಪತ್ರದಡಿ ಖನಗಾಂವ ಗ್ರಾಮದ ರಿ.ಸ ನಂಬರ 700 ನೇದ್ದರಲ್ಲಿ ಮಾರ್ಕಂಡೆಯ ಬಲದಂಡೆ ಕಾಲುವೆಯಿಂದ ಚಚಡಿ ಏತ ನೀರಾವರಿ ಯೋಜನೆಗೆ ಒಟ್ಟು ಕ್ಷೇತ್ರ 142ಎಕರೆ 07ಗುಂಟೆ ರ ಪೈಕಿ 16ಎಕರೆ 28ಗುಂಟೆ(6.75 ಹೆಕ್ಟರ್) ಗಾಯರಾಣಾ ಜಮೀನನ್ನು ಅರಣ್ಯ ಇಲಾಖೆಗೆ ವರ್ಗಾಯಿಸುವ ಕುರಿತು ಕಾರ್ಯನಿರ್ವಾಹಕ ಅಭಿಯಂತರರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಜಿ.ಆರ್.ಬಿಸಿ. ವಿಭಾಗ-3, ಗೋಕಾಕ ಇವರ ಪರವಾಗಿ ಪರಿಹಾರಾತ್ಮಕ ನೆಡುತೋಪು ಬೆಳೆಸಲು ಅರಣ್ಯ ಇಲಾಖೆಗೆ ವರ್ಗಾಯಿಸಲು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿತ್ತು.

ಓದಿತು (1) ರ ಪತ್ರದಡಿ ಸರ್ಕಾರದವರು ಮಾರ್ಕಂಡೇಯ ಬಲದಂಡೆ ಕಾಲುವೆಯಿಂದ ಚಚಡಿ ಏತ ನೀರಾವರಿ ಯೋಜನೆಯ ಕಾಲುವೆಯು ಅರಣ್ಯ ಪ್ರದೇಶದಲ್ಲಿ ಹಾಯ್ದು ಹೋಗುವುದರಿಂದ ಸದರಿ 8.00 ಹೆಕ್ಟೇರ್ ಅರಣ್ಯ ಭೂಮಿಗೆ ಪರ್ಯಾಯವಾಗಿ ಬೆಳಗಾವಿ ಜಿಲ್ಲೆ, ಗೋಕಾಕ ತಾಲ್ಲೂಕು, ಖನಗಾಂವ ಗ್ರಾಮದ ರಿ.ಸ ನಂಬರ 700ರಲ್ಲಿನ 142-07 ಎಕರೆ ಸರ್ಕಾರಿ ಗಾಯರಾಣ ಜಮೀನಿನ ಪೈಕಿ 16-28ಎಕರೆ ಜಮೀನನ್ನು ಕರ್ನಾಟಕ ಭೂ ಕಂದಾಯ ನಿಯಮಗಳು 1966ರ ನಿಯಮ 97(4)ರಡಿ ಗೋಮಾಳ ಶೀರ್ಷಿಕೆಯಿಂದ ತಗ್ಗಿಸಿ, ಕಾರ್ಯನಿರ್ವಾಹಕ ಅಭಿಯಂತರರು, ಕರ್ನಾಟಕ ನೀರಾವರಿ ನಿಗಮ. ನಿಯಮಿತ, ಜಿ.ಆರ್.ಬಿ.ಸಿ. ಬಿಭಾಗ-3 ಗೋಕಾಕ್ ಇವರ ಪರವಾಗಿ ಪರಿಹಾರಾತ್ಮಕ ನಡೆತೋಪು ಬೆಳಸಲು ಅರಣ್ಯ ಇಲಾಖೆಗೆ ವರ್ಗಾಯಿಸಲು ಸರ್ಕಾರದ ಪೂರ್ವಾನುಮೋದನೆಯನ್ನು ನೀಡಿರುತ್ತಾದೆ. ಆದ್ದುದರಿಂದ ಈ ಕೆಳಗಿನಂತೆ ಆದೇಶಿಸಿದೆ.

## :: ಆದೇಶ ::

ಗೋಕಾಕ ತಾಲ್ಲೂಕು, ಖನಗಾಂವ ಗ್ರಾಮದ ರಿ.ಸ ನಂಬರ 700 ನೇದ್ದರಲ್ಲಿ ಮಾರ್ಕಂಡೇಯ ಬಲದಂಡೆ ಕಾಲುವೆಯಿಂದ ಚಚಡಿ ಏತ ನೀರಾವರಿ ಯೋಜನೆಗೆ ಒಟ್ಟು ಕ್ಷೇತ್ರ 142ಎಕರೆ 07ಗುಂಟೆ ರ ಪೈಕಿ 16ಎಕರ 28ಗುಂಟೆ(6.75 ಹೆಕ್ಟರ್) ಗಾಯರಾಣಾ ಜಮೀನನ್ನು ಕರ್ನಾಟಕ ಭೂ ಕಂದಾಯ ನಿಯಮಗಳು 1966ರ ನಿಯಮ 97(4)ರಡಿ ಗೋಮಾಳ ಶೀರ್ಷಿಕೆಯಿಂದ ತಗ್ಗಿಸಿ, ಕಾರ್ಯನಿರ್ವಾಹಕ ಅಭಿಯಂತರರು, ಕರ್ನಾಟಕ ನೀರಾವರಿ ನಿಗಮ. ನಿಯಮಿತ, ಜಿ.ಆರ್.ಬಿ.ಸಿ. ಬಿಭಾಗ-3 ಗೋಕಾಕ್ ಇವರ ಪರವಾಗಿ ಪರಿಹಾರಾತ್ಮಕ ನಡೆತೋಪು ಬೆಳಸಲು ಅರಣ್ಯ ಇಲಾಖೆಗೆ ವರ್ಗಾಯಿಸಲು ಈ ಕೆಳಗಿನ ಚೆಕಬಂದಿ ಹಾಗೂ ಷರತ್ತುಗೊಳಪಟ್ಟು ಮಂಜೂರಾತಿ ನೀಡಿದೆ.

ಪ್ರಸ್ತಾಪಿತ ಖನಗಾಂವ ಗ್ರಾಮದ ಸರ್ವೆ ನಂಬರ 700ರಲ್ಲಿ ಒಟ್ಟು ಕ್ಷೇತ್ರ 142ಎಕರೆ 07ಗುಂಟೆ ರ ಪೈಕಿ 16ಎಕರೆ 28ಗುಂಟೆ(6.75 ಹೆಕ್ಟರ್)6.75 ಹೆಕ್ಟರ್ ಜಮೀನಿನ ಚೆಕ್‌ಬಂದಿ ವಿವರ

1. ಪೂರ್ವಕ್ಕೆ : ರಿ.ಸ ನಂಬರ 700ರ ಉಳಿದ ಜಮೀನು.
2. ಪಶ್ಚಿಮಕ್ಕೆ : ರಿ.ಸ ನಂಬರ 701, 703 ರ ಜಮೀನು.
3. ಉತ್ತರಕ್ಕೆ : ರಿ.ಸ ನಂಬರ 700ರ ಉಳಿದ ಜಮೀನು.
4. ದಕ್ಷಿಣಕ್ಕೆ : ರಿ.ಸ ನಂಬರ 610, 611, 612. ರ ಜಮೀನು.

ಕರಾರುಗಳು (ಷರ್ತುಗಳು)

1. ಪ್ರಸ್ತಾಪಿತ ಜಮೀನನ್ನು ಯಾವ ಉದ್ದೇಶಕ್ಕಾಗಿ ಮಂಜೂರಿಸಲಾಗಿದೆಯೋ ಅದೇ ಉದ್ದೇಶಕ್ಕಾಗಿ ಮಾತ್ರ ಉಪಯೋಗಿಸತಕ್ಕದ್ದು.

2. ಸದರಿ ಜಮೀನನ್ನು ಮಂಜೂರಿಸಿದ ದಿನಾಂಕದಿಂದ 2 ವರ್ಷದ ಒಳಗಾಗಿ ಅನುಮೋದಿತ ಯೋಜನಾ ನಕ್ಷೆ ಪ್ರಕಾರ ಉದ್ದೇಶಿತ ಕಾರ್ಯಕ್ಕಾಗಿ ಉಪಯೋಗಿಸತಕ್ಕದ್ದು.

Scanned with CamScanner

3. ಸದರಿ ಜಮೀನಿನ ಸುತ್ತಲೂ ತಂತಿ ಬೇಲಿ, ಕಂಪೌಂಡ್ ಗೋಡೆ ನಿರ್ಮಿಸಿಕೊಂಡು ಇಲಾಖೆಯು ತಮ್ಮ ಸುಪರ್ದಿಯಲ್ಲಿ ಇಟ್ಟುಕೊಳ್ಳಬೇಕು ಹಾಗೂ ಯಾವುದೇ ಸಂದರ್ಭದಲ್ಲಿ ಸದರಿ ಜಮೀನಿನಲ್ಲಿ ಯಾವುದೇ ರೀತಿಯ ಅತಿಕ್ರಮಣವಾಗದಂತೆ ನೋಡಿಕೊಳ್ಳತಕ್ಕದ್ದು.

4. ಪ್ರಸ್ತಾಪಿತ ಜಮೀನನ್ನು ಅಡವು ಇಡುವುದಾಗಲಿ ಅಥವಾ ಬೇರೆ ರೀತಿಯಿಂದ ಯಾರಿಗೂ ಹಸ್ತಾಂತರಿಸತಕ್ಕದ್ದಲ್ಲ.

5. ಮೇಲ್ಕಂಡ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಜಮೀನನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳಲಾಗುವುದು.

6. ಎಲ್ಲ ಶರತ್ತುಗಳನ್ನು ಒಪ್ಪಿಕೊಂಡಿರುವ ಬಗ್ಗೆ ಕಾರ್ಯನಿರ್ವಾಹಕ ಅಭಿಯಂತರರು, ಕರ್ನಾಟಕ ನೀರಾವರಿ ನಿಗಮ. ನಿಯಮಿತ, ಜಿ.ಆರ್.ಬಿ.ಸಿ. ಬಿಭಾಗ-3 ಗೋಕಾಕ್ ಇವರು ಕರ್ನಾಟಕ ಭೂಮಂಜೂರಾತಿ ನಿಯಮಗಳು 1969 ರನ್ವಯ ತಹಶೀಲ್ದಾರ ಗೋಕಾಕ ಇವರಲ್ಲಿ ಒಪ್ಪಿಗೆ ಪತ್ರ ಬರೆದು ಕೊಡತಕ್ಕದ್ದು.

7. ಜಮೀನು ಮಂಜೂರಿಸುವಿಕೆ ವಿಷಯದಲ್ಲಿ ಸರ್ಕಾರದಿಂದ ಕಾಲಕಾಲಕ್ಕೆ ನೀಡುವ ಸೂಚನೆಗಳಿಗೆ ಅನುಸಾರ ಷರತ್ತುಗಳ ಮಾರ್ಪಾಡು/ ಸೇರ್ಪಡೆ ಅಧಿಕಾರವನ್ನು ಜಿಲ್ಲಾಧಿಕಾರಿಗಳು ಹೊಂದಿರುವುದು.

(ಎನ್. ಜಯರಾಮ್)
ಜಿಲ್ಲಾಧಿಕಾರಿಗಳು, ಬೆಳಗಾವಿ

ಪ್ರತಿಗಳು:

1. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಕಂದಾಯ ಇಲಾಖೆ ಬಹುಮಹಡಿಗಳ ಕಟ್ಟಡ ಬೆಂಗಳೂರು ಇವರಿಗೆ ಗೌರವಗಳೊಂದಿಗೆ ಮಾಹಿತಿಗಾಗಿ ಸಲ್ಲಿಸಿದೆ.
2. ಮಾನ್ಯ ಪ್ರಾದೇಶಿಕ ಆಯುಕ್ತರು ಬೆಳಗಾವಿ ಇವರಿಗೆ ಗೌರವಗಳೊಂದಿಗೆ ಮಾಹಿತಿಗಾಗಿ ಸಲ್ಲಿಸಿದೆ.
3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತ ಬೆಳಗಾವಿ ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
4. ಕಾರ್ಯನಿರ್ವಾಹಕ ಅಭಿಯಂತರರು, ಕರ್ನಾಟಕ ನೀರಾವರಿ ನಿಗಮ. ನಿಯಮಿತ, ಜಿ.ಆರ್.ಬಿ.ಸಿ. ಬಿಭಾಗ-3 ಗೋಕಾಕ್ ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
5. ಅರಣ್ಯ ಸಂರಕ್ಷಣಾಧಿಕಾರಿಗಳು ಬೆಳಗಾವಿ ವೃತ್ತ, ಬೆಳಗಾವಿ ಇವರಿಗೆ ಮಾಹಿತಿಗಾಗಿ ಕಳುಹಿಸಿದೆ.
6. ಉಪವಿಭಾಗಾಧಿಕಾರಿಗಳು, ಬೈಲಹೊಂಗಲ ಇವರಿಗೆ ಸೂಕ್ತ ಕ್ರಮಕ್ಕಾಗಿ ಕಳಿಸಿದೆ.
7. ವಲಯ ಅರಣ್ಯ ಅಧಿಕಾರಿಗಳು ಗೋಕಾಕ ವಲಯ, ಗೋಕಾಕ ಇವರಿಗೆ ಮಾಹಿತಿಗಾಗಿ ಕಳುಹಿಸಿದೆ.
8. ಕಾರ್ಯನಿರ್ವಾಹಕ ಅಧಿಕಾರಿಗಳು ತಾಲೂಕ ಪಂಚಾಯತ, ಗೋಕಾಕ ಇವರಿಗೆ ಮಾಹಿತಿಗಾಗಿ ಕಳುಹಿಸಿದೆ.
9. ತಹಶೀಲ್ದಾರ, ಗೋಕಾಕ ಇವರಿಗೆ ಸೂಕ್ತ ಕ್ರಮಕ್ಕಾಗಿ ಕಡತ ಪುಟ 1 ರಿಂದಾ 48 ರ ವರೆಗೆ ಲಗತ್ತಿಸಿ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.

2/- ಗೋಕಾಕ ತಾಲೂಕಿನ ಖನಗಾಂವ ಗ್ರಾಮದ ರಿ.ಸ ನಂಬರ 700 ನೇದ್ದರಲ್ಲಿ ಮಾರ್ಕಂಡೆಯ ಬಲದಂಡೆ ಕಾಲುವೆಯಿಂದ ಚಚಡಿ ಏತ ನೀರಾವರಿ ಯೋಜನೆ ಒಟ್ಟು ಕ್ಷೇತ್ರ 142ಎಕರೆ 07ಗುಂಟೆ ರ ಪೈಕಿ 16ಎಕರೆ 28ಗುಂಟೆ(6.75 ಹೆಕ್ಟರ್) ಗಾಯರಾಣಾ ಜಮೀನು ಕಾರ್ಯನಿರ್ವಾಹಕ ಅಭಿಯಂತರರು, ಕರ್ನಾಟಕ ನೀರಾವರಿ ನಿಗಮ. ನಿಯಮಿತ, ಜಿ.ಆರ್.ಬಿ.ಸಿ. ಬಿಭಾಗ-3 ಗೋಕಾಕ್ ಇವರ ಪರವಾಗಿ ಪರಿಹಾರಾತ್ಮಕ ನಡೆತೋಪು ಬೆಳೆಸಲು ಅರಣ್ಯ ಇಲಾಖೆಗೆ ನಿಯಮಾನುಸಾರ ಜಮೀನಿನ ಕಬ್ಜಾ ನೀಡಿ ಪಹಣಿ ಪತ್ರಿಕೆಯಲ್ಲಿ ನಮೂದಿಸಿ ಕಬ್ಜಾ ಪಾವತಿ ಪಂಚನಾಮೆ, ಹಾಗೂ ಪಹಣಿ ಪತ್ರಿಕೆಯೊಂದಿಗೆ ಈ ಕಾರ್ಯಾಲಯಕ್ಕೆ ವರದಿ ಸಲ್ಲಿಸಬೇಕಾಗಿದೆ.

01/02
ಅಪರ ಜಿಲ್ಲಾಧಿಕಾರಿಗಳು
ಬೆಳಗಾವಿ

Assistant Executive Engineer
Karnataka Neeravari Nigama Ltd

Scanned with CamScanner